ಅ) ಇದ್ದಲ್ಲಿ ಯಾವಾಗ ಮಾಡಲಾಗುವುದು ?

ಇ) ಗ್ರಾಮಪಂಚಾಯತ್ ನೌಕರರಿಗೆ ಕನಿಷ್ಠ ವೇತನ ನಿಗಿಧಿಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ ? ಇದ್ದಲ್ಲಿ ಎಷ್ಟು ಸಮಯದೊಳಗೆ ನಿಗಧಿಪಡಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿಪಿ : 102: ವಿಇಎಲ್. 90 ದಿನಾಂಕ : 10-1-94 ರಲ್ಲಿ ಗ್ರಾಮ ಪಂಚಾಯತ್ ನೌಕರರಿಗೆ ನೀಡಬೇಕಾಗಿರುವ ಗರಿಷ್ಠ ವೇತನವನ್ನು ನಿಗಧಿ ಪಡಿಸಲಾಗಿದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸಿರುವ ಪುಸ್ತಕಗಳು

678 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಪ್ರೌಢ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1996-97 ಮತ್ತು 1997-98ನೇ ಸಾಲಿನಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸಿರುವ ಪುಸ್ತಕಗಳ ಒಟ್ಟು ಹಣ ಎಷ್ಟು ?

ಆ) ಈ ಪುಸ್ತಕಗಳನ್ನು ಯಾವ ಆಧಾರದ ಮೇಲೆ ಖರೀದಿಸಲಾಗಿದೆ ? ಖರೀದಿಸಿದ ಪುಸ್ತಕವನ್ನೇ ಪುನಃ ಖರೀದಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಮುಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದು ಕೊಂಡಿರುವ ಕ್ರಮಗಳೇನು ?

ಶ್ರೀ ಜಿ. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು).

ಅ) 1996-97 - 156.15 ಲಕ್ಷ ರೂ.ಗಳು

1997-98 - 195.18 ಲಕ್ಷ ರೂ.ಗಳು

ಆ) ಮತ್ತು ಇ) ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಉನ್ನತ ಮಟ್ಟದ ಗ್ರಂಥ ಆಯ್ಕೆ ಸಮಿತಿಯನ್ನು ರಚಿಸಿದ್ದು, ಆ ಸಮಿತಿ ಆಯ್ಕೆ ಮಾಡಿದ ಗ್ರಂಥಗಳನ್ನು ಖರೀದಿಸಲಾಗಿದೆ.

ಹೌದು. ಪುಸ್ತಕ ಖರೀದಿ ನಿಯಮಾನುಸಾರ ಒಂದು ಗ್ರಂಥಾಲಯಕ್ಕೆ ಗರಿಷ್ಠ 3 ಪುಸ್ತಕಗಳನ್ನು ಖರೀದಿಸಬಹುದಾಗಿದೆ. ಕೆಲವು ಸಂದರ್ಭಗಳಲ್ಲಿ ಓದುಗರ ಸಂಖ್ಯೆ ಹೆಚ್ಚಳದಿಂದಾಗಿ ಆಯ್ಕೆ ಸಮಿತಿಯ ಅನುಮೋದನೆ ಮೇರೆಗೆ ಕೆಲವು ಶೀರ್ಷಿಕೆಗಳನ್ನು ಪುನಃ ಖರೀದಿಸಬಹುದಾಗಿದೆ.